KACN010006392026

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ

ದಿನಾಂಕ 5ನೇ ಮಾಹೆ ಜೂನ್ 2026

**ಉಪಸ್ಥಿತರುಃ** **ಶ್ರೀಮತಿ ಪ್ರಭಾವತಿ ಜಿ.**
**ಎಲ್ ಎಲ್ ಎಂ.**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**

**ಕ್ರಿಮಿನಲ್ ಮಿಸ್ ನಂ. 214/2026**

ಅರ್ಜಿದಾರರುಃ ಮಂತ್ರಿ @ಮಂದ್ರಿ (ಆ-2)
ಲೇಟ್. ಇರ್ಲೆಗೌಂಡರ್ @ ಇರ್ಲೆ
ವಯಸ್ಸು ಸುಮಾರು 45 ವರ್ಷ,
ವಾಸ: ಪೆದ್ದನಪಾಳ್ಯ ಗ್ರಾಮ,
ಹನೂರು ತಾಲ್ಲೂಕು,
ಚಾಮರಾಜನಗರ ಜಿಲ್ಲೆ.

(ಪರವಾಗಿ ಶ್ರೀ ಎಂ.ಎಂ.ಪಿ., ವಕೀಲರು)

ವಿರುದ್ಧ

ಎದುರುದಾರರುಃ ಸರ್ಕಾರದ ಪರವಾಗಿ,
ರಾಮಾಪುರ ಪೊಲೀಸ್ ಠಾಣೆ
ಚಾಮರಾಜನಗರ ಜಿಲ್ಲೆ.

(ಪರವಾಗಿ ಸರ್ಕಾರಿ ಅಭಿಯೋಜಕರು)

## ಆದೇಶ

ಅರ್ಜಿದಾರರು ಸನ್ನಿಧಿ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023 ಕಲಂ 482 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಅರ್ಜಿದಾರ/2ನೇ ಆರೋಪಿತರ ವಿರುದ್ಧ ಎದುರುದಾರರು ಎನ್.ಡಿ.ಪಿ.ಎಸ್ ಕಾಯ್ದೆ ಕಲಂ 20(**b**)(**ii**)(**B**) ರಅಡಿಯಲ್ಲಿ ಗುನ್ನಾ ಸಂಖ್ಯೆ 120/2025 (**Spl**. **Case No**. 230/2025) ರಂತೆ ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

**2. ಕೇಸಿನ ವಿಧ್ಯಮಾನಗಳ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆಃ**

ದಿನಾಂಕ: 13.08.2025 ರಂದು ಸಂಜೆ 6.45 ಗಂಟೆ ಸಮಯದಲ್ಲಿ ಕೊಡಲೂರು ಗ್ರಾಮದ ಕಡೆಯಿಂದ ನಾಲ್ ರೋಡ್ ಗ್ರಾಮದ ಕಡೆಗೆ 1ನೇ ಆರೋಪಿಯು ಆಕ್ರಮವಾಗಿ ಒಣಗಾಂಜಾವನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ಮೋಟಾರ್ ಬೈಕಿನಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ ಎಂಬ ಮಾಹಿತಿ ಮೇರೆಗೆ ಸಾಕ್ಷಿ ರವರು ಸಾಕ್ಷಿ 2 ರಿಂದ 4 ರವರ ಜೊತೆಯಲ್ಲಿ ನಾಲಾರೋಡ್ ಗ್ರಾಮದ ಹೂಗ್ಯಂ ಮುಖ್ಯರಸ್ತೆಯಲ್ಲಿರುವ ಗಡಪಾರೆ ಹಳ್ಳದ ಸೇತುವೆ ಬಳಿ ಕಾಯುತ್ತಿದ್ದಾಗ ರಾತ್ರಿ 8.30 ಗಂಟೆ ಸಮಯದಲ್ಲಿ ಕೊಡಲೂರು ಗ್ರಾಮದ ಕಡೆಯಿಂದ ನಾಲ್ ರೋಡ್ ಗ್ರಾಮದ ಕಡೆಗೆ ಆರೋಪಿ 1 ರವರು ಕೆಎ-10, ಕೆ-5902 ಹೀರೋ ಹೊಂಡಾ ಫ್ಯಾಷನ್ ಪ್ರೋ ಬೈಕ್‌ನ್ನು ಚಾಲನೆ ಮಾಡಿಕೊಂಡು ಗಾಂಜಾ ಸಾಗಾಣಿಕೆ ಮಾಡುತ್ತಿದ್ದವವನ್ನು ವಶಕ್ಕೆ ಪಡೆದು ಆತನ ಬಳಿ ಇದ್ದ ಖಾಕಿ ಮತ್ತು ಕಪ್ಪು ಮಿಶ್ರಿತ ಬಣ್ಣದ ಬ್ಯಾಗ್ನೊಳಗೆ ನೀಲಿ ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿ 1 ಕೆ.ಜಿ. 840 ಗ್ರಾಂ ತೂಕದ ಅಂದಾಜು ಸುಮಾರು 65.000/- ರೂ ಬೆಲೆ ಬಾಳುವ ಹೊ ಗೊಂಡೆ ಬೀಜ ಮಿಶ್ರಿತ ಒಣಗಾಂಜಾವನ್ನು ಹಾಗೂ ಸಾಗಾಣಿಕೆಗೆ ಬಳಸಿದ್ದ ಮೇಲ್ಕಂಡ ಮೋಟಾರ್ ಬೈಕ್ನು ವಶಕ್ಕೆ ಪಡೆದು ಹಾಗೂ ಆರೋಪಿ 1 ರವರು ಆರೋಪಿ 2 ರವರಿಂದ ಗಾಂಜಾವನ್ನು ಖರೀದಿಸಿಕೊಂಡು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಹಣ ಸಂಪಾದಿಸಲು ಸಾಕ್ಷಿ 5 ರವರ ಹೆಸರಿನಲ್ಲಿರುವ ಮೋಟಾರ್ ಬೈಕ್‌ನಲ್ಲಿ ಸಾಗಾಣಿಕೆ ಮಾಡುತ್ತಿರುವುದು ದೃಢಪಟ್ಟಿರುವುದರಿಂದ ಪ್ರಕರಣದ 1 ಮತ್ತು 2ನೇ ಆರೋಪಿತರ ವಿರುದ್ಧ ದೋಷಾರೋಪಣೆ ಸಲ್ಲಿಸಲಾಗಿದೆ. ಅದರಂತೆ ಆರೋಪಿಯ ವಿರುದ್ಧ ಸದರಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

3. ಈ ಪ್ರಕರಣದಲ್ಲಿ ಅರ್ಜಿದಾರರ ಪರವಾಗಿ ವಾದವನ್ನು ಮಂಡಿಸುತ್ತಾ ಅರ್ಜಿದಾರರು ಹನೂರು ತಾಲ್ಲೂಕು, ಪೆದ್ದನಪಾಳ್ಯ ಗ್ರಾಮದಲ್ಲಿ ಖಾಯಂ ನಿವಾಸಿಯಾಗಿದ್ದು, ಸುಳ್ಳು ಆರೋಪಗಳನ್ನು ಹೊರಿಸಿ ಪಿರ್ಯಾದುದಾರರು ವಾಸ್ತವಿಕಾಂಶವನ್ನು ಮರೆಮಾಚಿಸಿ ತೊಂದರೆ ಕೊಡುವ ಉದ್ದೇಶದಿಂದ ಈ ಪ್ರಕರಣದಲ್ಲಿ ಸಿಲುಕಿಸಿರುತ್ತಾರೆ. ಈಗಾಗಲೇ 1ನೇ ಆರೋಪಿಗೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲು ಬೆಂಗಳೂರು ನ್ಯಾಯಾಲಯದಲ್ಲಿ ಜಾಮೀನು ಮಂಜೂರಾಗಿರುವುದು ಸರಿಯಷ್ಟೆ ಹಾಗೇಯೇ 1ನೇ ಆರೋಪಿಯ ಹೇಳಿಕೆಯ ಆಧಾರದ ಮೇಲೆ ಎರಡನೇ ಆರೋಪಿಯನ್ನು ರಿಮ್ಯಾಂಡ್ ಅರ್ಜಿಯಲ್ಲಿ ಸದರಿ ರವರ ಹೆಸರಿಸಿರುವುದನ್ನು ಹೊರೆತುಪಡಿಸಿದರೇ ಎರಡನೇ ಆರೋಪಿರವರ ಸಹಬಾಗಿತ್ವವು ಎಲ್ಲೂ ಸಹ ಪ್ರಥಮ ವರ್ತಮಾನ ವರದಿಯಿಂದ ಅಂತಿಮ ವರದಿಯ ಜೊತೆ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದ ವೇಳೆಯಲ್ಲಿ ಎರಡನೆ ಆರೋಪಿಯನ್ನು ಪ್ರಕರಣದಲ್ಲಿ ಸಿಲುಕಿಸಿರುತ್ತಾರೆ ಹೊರೆತು ಎರಡನೇ ಆರೋಪಿ ರವರ ಮೇಲೆ ಹೊರೆಸಿರುವ ಆರೋಪಗಳು ಎಲ್ಲೂ ಸಹ ಗೋಚರಿಸುವುದಿಲ್ಲ. ಆರೋಪಿಯಿಂದ ಭೌತಿಕ ಮುದ್ದೇಮಾಲುಗಳು ಸಹ ವಶಪಡಿಸಿಕೊಂಡಿರುವುದರಿಂದ ಎರಡನೇ ಆರೋಪಿ ರವರು ತನಿಖೆಗೆ ಅವಶ್ಯಕತೆ ಇರುವುದಿಲ್ಲವಾದ್ದರಿಂದ ಎರಡನೇ ಆರೋಪಿ/ಅರ್ಜಿದಾರರ ಪರ ಸಲ್ಲಿಸಲಾಗಿರುವ ಈ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತಾರೆ. ಅರ್ಜಿದಾರರರ ಮೇಲೆ ಎಸಗಿರುವ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತಾರೆ. ಈ ಪ್ರಕರಣದಲ್ಲಿ ಮೇಲ್ಕಂಡ ಅರ್ಜಿದಾರರು ಭಾಗಿಯಾಗದೇ ಇದ್ದರೂ ಪಿರ್ಯಾದುದಾರರು ಬೇಕೆಂತಲೇ ಈ ಮೇಲ್ಕಂಡ ಅರ್ಜಿದಾರರ ಹೆಸರನ್ನು ಸೇರಿಸಿರುತ್ತಾರೆ. ಹಾಗೂ ಈ ಸುಳ್ಳು ಪ್ರಕರಣವನ್ನು ಇಲ್ಲ ಸಲ್ಲದ ಆರೋಪವನ್ನು ಹೊರೆಸಿ ಅರ್ಜಿದಾರರ ವಿರುದ್ಧ ಸುಳ್ಳು ಮೊಕದ್ದಮೆಯನ್ನು ಹೂಡಿರುತ್ತಾರೆ. ಅರ್ಜಿದಾರರು ಮುಗ್ಧರಾಗಿದ್ದು, ಕಾನೂನನ್ನು ಪರಿಪಾಲಿಸುವ ಸತ್ಪಜೆಯಾಗಿರುತ್ತಾರೆ. ಅರ್ಜಿದಾರ ಮೇಲೆ ಪಿರ್ಯಾದುದಾರರು ಹೊರಿಸಿರುವ **NARCOTIC DRUGS** & **PSYCHOTROPIC SUBSTANCES ACT**, 1985 (**U/S**–20(**b**)(**ii**) (**B**)) ರೀತ್ಯಾ ಹೊರೆಸಿರುವ ಆರೋಪಗಳು ಈ ಮೇಲ್ಕಂಡ ಅರ್ಜಿದಾರರ ಮೇಲೆ ಅಟ್ರಾಕ್ಟ್ ಆಗುವುದಿಲ್ಲ ಎಂಬುದು ಮಾನ್ಯ ನ್ಯಾಯಾಲಯವು ಓಮ್ಮೆ ಕೂಲಂಕೂಶವಾಗಿ ಪ್ರಥಮ ವರ್ತಮಾನ ವರದಿಯನ್ನು ಓಮ್ಮೆ ಕೂಲಂಕೂಶವಾಗಿ ಪರಿಶೀಲಿಸಿದಂತಹ ವೇಳೆಯಲ್ಲಿ ಗೋಚರಿಸುತ್ತದೆ ಈ ಮೇಲ್ಕಂಡ ಅರ್ಜಿದಾರರ ಮೇಲೆ ಬೇಕೆಂತೆಲೇ ಯಾವುದೇ ರೀತಿಯ ಪಾತ್ರ ಇಲ್ಲದಿದ್ದಾಗಿಯೂ ಸಹ

ಸೇರಿಸಿರುವುದು ಗೋಚರಿಸುತ್ತದೆ. ಮುಂದುವರೆದು **NARCOTIC DRUGS** & **PSYCHOTROPIC SUBSTANCES ACT**, 1985 (**U/S**– 20(**b**)(**ii**) (**B**)) ಆರೋಪಗಳು ಜಾಮೀನೀಯವಲ್ಲದ ಅಪರಾದವಾಗಿದ್ದು, ಯಾವುದೇ ರೀತಿಯ ಮರಣದಂಡನೆಯಿಂದಾಗಲೀ ಅಥವಾ ಜೀವಾವಧಿ ಶಿಕ್ಷೆಯಿಂದಾಗಲೀ ಶಿಕ್ಷಿಸಲ್ಪಡುವ ಅಪರಾಧಗಳಾಗಿರುವುದಿಲ್ಲ. ಈ ಮೇಲ್ಕಂಡ ಅರ್ಜಿದಾರರ ಮೇಲೆ ಎಸಗಿರುವ ಆರೋಪಗಳ ವಿವರಣೆಯನ್ನು ಒಮ್ಮೆ ಮಾನ್ಯ ನ್ಯಾಯಾಲಯವು ಸದರಿ ದೂರನ್ನು ತುಲಾನಾತ್ಮಕವಾಗಿ ಪರೀಶಿಲಿಸಿದ ಸಂಧರ್ಭದಲ್ಲಿ **NARCOTIC DRUGS** & **PSYCHOTROPIC SUBSTANCES ACT**, 1985 (**U/S**– 20(**b**)(**ii**) (**B**)) ಕಲಂ ಅಟ್ರಾಕ್ಟ್ ಆಗುವುದಿಲ್ಲ. ಹಾಗೇಯೇ ಕಾಲ್ಪನಿಕವಾಗಿ ಸೃಷ್ಟಿಸಿ ಹೆಣೆದಿರುವ ಕಟ್ಟು ಕಥೆಯಾಗಿರುತ್ತದೆ ಎಂಬುದು ಈ ಮೇಲ್ಕಂಡ ಪಿರ್ಯಾದುದಾರರು ನೀಡಿರುವ ದೂರಿನ್ನು ಒಮ್ಮೆ ತುಲಾನಾತ್ಮಕವಾಗಿ ಪರಿಶೀಲಿಸಿದಂತಹ ವೇಳೆಯಲ್ಲಿ ಸದರಿ ಪ್ರಕರಣವು ಉದ್ದೇಶಪೂರ್ವಕವಾಗಿ ದುರುದ್ದೇಶದಿಂದ ಅರ್ಜಿದಾರರ ಮೇಲೆ ಈ ಒಂದು ಸುಳ್ಳು ಪ್ರಕರಣವನ್ನು ಹೂಡಿರುವುದು ಅಂತಿಮ ವರದಿಯನ್ನು ಪರಿಶೀಲಿಸಿದಂತಹ ವೇಳೆಯಲ್ಲಿ ಘನ ನ್ಯಾಯಾಲಯದ ಮುಂದೆ ಬಿಂಬಿತವಾಗುವುದರಿಂದ ಮಾನ್ಯ ನ್ಯಾಯಾಲಯವು ಅರ್ಜಿದಾರ ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತಾರೆ. ಮೇಲ್ಕಂಡ ಪ್ರಕರಣದಲ್ಲಿ ಸಲ್ಲಿಸಿರುವ ದಾಖಾಲಾತಿಗಳನ್ನು ಒಮ್ಮೆ ಪರಿಶೀಲಿಸಿ ಅಂತಿಮವರದಿ ಹಾಗೂ ಇತರ ನೋಡಿದರೆ ಅರ್ಜಿದಾರರು ಯಾವುದೇ ಅಪರಾಧವನ್ನು ಎಸಗಿದ್ದಾರೆಂಬುದಕ್ಕೆ ಯಾವುದೇ ಸಕಾರಣಗಳು ಇರುವುದಿಲ್ಲ. ಅರ್ಜಿದಾರರು ಘನ ನ್ಯಾಯಾಲಯವು ಒಪ್ಪವಂತಹ ಜಾಮೀನುದಾರರನ್ನು ನೀಡಲು ಒಪ್ಪಿರುವುದಾಗಿ ತಿಳಿಯಬಯಸುತ್ತಾರೆ. ಅರ್ಜಿದಾರರು ಯಾವುದೇ ಕಾಲದಲ್ಲೂ ಸಹ ಹಾಗೂ ಯಾವುದೇ ಕಾರಣಕ್ಕೂ ಸರ್ಕಾರಿ ಅಭಿಯೋಜಕರ ಪರ ಸಾಕ್ಷಿಗಳನ್ನು ಹೆದರಿಸುವುದಿಲ್ಲ ಅಥವಾ ಬೆದರಿಕೆ ಹಾಕುವುದಿಲ್ಲ ಎಂದು ಒಪ್ಪಿರುವುದಾಗಿ ತಿಳಿಯಬಯಸುತ್ತಾರೆ. ಅರ್ಜಿದಾರರು ಘನ ನ್ಯಾಯಾಲಯವು ಯುಕ್ತವೆಂದು ವಿಧಿಸುವ ಎಲ್ಲಾ ಷರತ್ತುಗಳನ್ನು ಒಪ್ಪಲು ಬದ್ದವಾಗಿರುವುದಾಗಿ ತಿಳಿಯ ಬಯಸುತ್ತಾರೆ. ಅರ್ಜಿದಾರರು ಮಾನ್ಯ ಘನ ನ್ಯಾಯಾಲಯವು ತನ್ನ ಮುಂದೆ ಹಾಜರಾಗಲು ಯಾವುದೇ ಕಾಲದಲ್ಲಾಗಲೀ ತಪ್ಪದೆ ಒಪ್ಪಿರುವುದಾಗಿ ತಿಳಿಯಪಡಿಸುತ್ತಾರೆ. ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸದಿದ್ದ ಸಂದರ್ಭದಲ್ಲಿ ಅವರ ಕುಟುಂಬಕ್ಕೆ

ತುಂಬಲಾರದ ನಷ್ಟ ಉಂಟಾಗುತ್ತದೆ. ಪಿರ್ಯಾದುದಾರರು ಅರ್ಜಿದಾರರ ಹೆಸರನ್ನು ಬೇಕೆಂತಲೇ ಸೇರಿಸಿರುತ್ತಾರೆಯೇ ವಿನಃ ಸದರಿ ಅರ್ಜಿದಾರರಿಗಾಗಲೀ ಅಥವಾ ಘಟನೆಗಾಗಲೀ ಯಾವುದೇ ರೀತಿಯ ಸಂಬಂಧ ಇಲ್ಲದಿರುವುದು ಮೇಲು ನೋಟಕ್ಕೆ ಗೋಚರಿಸುವುದರಿಂದ ಅರ್ಜಿದಾರರು ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತಾರೆ. ಆದುದರಿಂದ ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

4. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರು ಆರೋಪಿತರ ಜಾಮೀನು ಅರ್ಜಿಗೆ ತಮ್ಮ ವಿವರವಾದ ತಕರಾರುಗಳನ್ನು ಸಲ್ಲಿಸಿದ್ದು ಈ ಕೇಸಿನ ವಿದ್ಯಮಾನಗಳನ್ನು ಹೇಳಿ, ಪ್ರಕರಣದ ಮೇಲ್ಕಂಡ ಆರೋಪಿಯು 1ನೇ ಆರೋಪಿಯ ಜೊತೆ ಸೇರಿಕೊಂಡು ಯಾವುದೇ ರಹದಾರಿ ಇಲ್ಲದೇ ಆಕ್ರಮವಾಗಿ ಒಣ ಗಾಂಜಾವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಲುವಾಗಿ ತಮ್ಮ ವಾಹನದಲ್ಲಿ ಸಾಗಾಣಿಕೆ ಮಾಡಲು ತೆಗೆದುಕೊಂಡು ಹೋಗುತ್ತಿದ್ದುದ್ದು ಹಾಗೂ ಸದರಿ ಆರೋಪಿತನು 1ನೇ ಆರೋಪಿಗೆ ಸಹಕಾರ ನೀಡಿ ಮೇಲ್ಕಂಡಂತೆ ಅಪರಾಧವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅರ್ಜಿದಾರ/ಆರೋಪಿತನು ಎಸಗಿರುವ ಅಪರಾಧವು ಜಾಮೀನು ರಹಿತವಾಗಿದ್ದು, 10 ವರ್ಷ ಕಠಿಣ ಸಜೆ ವಿಧಿಸತಕ್ಕಂತಹ ಅಪರಾಧವಾಗಿರುತ್ತದೆ ಮತ್ತು ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಿಚಾರಣೆ ಮಾಡತಕ್ಕಂತಹ ಪ್ರಕರಣವಾಗಿರುತ್ತದೆ. ಮೇಲ್ಕಂಡ ಆರೋಪಿಯು ಕೃತ್ಯ ನಡೆದಾಗಿನಿಂದಲೂ ತಲೆ ಮರೆಸಿಕೊಂಡಿದ್ದು, ಈತನು ವಿಚಾರಣೆಗೆ ಅವಶ್ಯಕತೆ ಇರುತ್ತಾರೆ. ಈಗ ಮಾನ್ಯ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿಕೊಂಡಿದ್ದು ಸದರಿ ಆರೋಪಿತನ ನಿರೀಕ್ಷಣಾ ಜಾಮೀನು ಅರ್ಜಿಯು ಊರ್ಜಿತವಾಗತಕ್ಕದ್ದಲ್ಲ. ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತಾರೆ ಹಾಗೂ ಹೆಚ್ಚಿನ ಸಾಕ್ಷಾಧಾರಗಳನ್ನು ಸಂಗ್ರಹಿಸಬೇಕಾಗಿರುತ್ತಾರೆ ಹಾಗೂ ಹೆಚ್ಚಿನ ಮಹತ್ವದ ದಾಖಲೆಗಳನ್ನು ಸಂಗ್ರಹಿಸಿರುತ್ತಾರೆ. ಈ ಹಂತದಲ್ಲಿ ಈ ಆರೋಪಿತನನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದಲ್ಲಿ ಈತನು ಸಾಕ್ಷಿದಾರರನ್ನು ಹೆದರಿಸುವ, ಆಸೆ ಆಮಿಷಗಳನ್ನೊಡ್ಡಿ ಸಾಕ್ಷ್ಯಾಧಾರಗಳನ್ನು ಹಾಳು ಮಾಡುವ, ವಿಚಾರಣೆಗೆ ಅಡ್ಡಿಯುಂಟು ಮಾಡುವ ಹಾಗೂ ಬೇರೆ ಕಡೆ ತಲೆ ಮರೆಸಿಕೊಂಡು ಪರಾರಿಯಾಗುವ ಎಲ್ಲಾ ಸಾಧ್ಯತೆಗಳಿರುತ್ತವೆ. ಅಲ್ಲದೆ ಮತ್ತೆ ಇಂತಹದ್ದೇ

ಕೃತ್ಯಗಳನ್ನು ಮುಂದುವರಿಸಿ ಯುವ ಜನಾಂಗವನ್ನು ತಪ್ಪುದಾರಿಗೆಳೆಯುವ ಎಲ್ಲಾ ಸಾಧ್ಯತೆಗಳಿರುತ್ತವೆ. ಈ ಹಂತದಲ್ಲಿ ಸದರಿ ಆರೋಪಿಯು ನಿರೀಕ್ಷಣಾ ಜಾಮೀನು ಪಡೆಯಲು ಅರ್ಹನಿರುವುದಿಲ್ಲ. ಅರ್ಜಿದಾರ/ಆರೋಪಿತನನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಟ್ಟಲ್ಲಿ ಇವರು ಬೇರೆ ರಾಜ್ಯಗಳ ಕಡೆ ತಲೆ ಮರೆಸಿಕೊಂಡು ಪರಾರಿಯಾಗಿರುವ ಸಂಭವವಿರುತ್ತದೆ. ಆದುದರಿಂದ ಸದರಿ ಅರ್ಜಿದಾರ/ಆರೋಪಿತನ ನಿರೀಕ್ಷಣಾ ಜಾಮೀನು ಅರ್ಜಿಯು ಊರ್ಜಿತವಾಗತಕ್ಕದಲ್ಲ. ಅರ್ಜಿದಾರ/ಆರೋಪಿತನ ವಿರುದ್ಧ ಆಪಾಧನೆಗಳು ಗಂಭೀರ ಸ್ವರೂಪದ್ದಾಗಿದ್ದು, ಜಾಮೀನು ರಹಿತವಾಗಿದ್ದು, ಆರೋಪಿತನು ತನ್ನ ನಿರೀಕ್ಷಣಾ ಜಾಮೀನು ಕೋರಿ ಯಾವುದೇ ಸಕಾರಣಗಳನ್ನು ನೀಡಿರುವುದಿಲ್ಲ. ತಮ್ಮ ಜಾಮೀನು ಅರ್ಜಿಯಲ್ಲಿ ಕಾಣಿಸಿರುವ ವಿವರಗಳು ನಿಜವಿರುವುದಿಲ್ಲ. ಹಾಗೂ ಅರ್ಜಿದಾರ/ಆರೋಪಿತನು ತನ್ನ ನಿರೀಕ್ಷಣಾ ಜಾಮೀನು ಅರ್ಜಿಯಲ್ಲಿ ಕಾಣಿಸಿರುವ ಎಲ್ಲಾ ಕಾರಣಗಳು ಸತ್ಯಕ್ಕೆ ದೂರವಾಗಿದ್ದು, ಅವುಗಳನ್ನು ಕೇವಲ ತಮ್ಮನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲು ಸೃಷ್ಟಿಸಿದಂತಹ ಸುಳ್ಳು ಕಾರಣಗಳಾಗಿದ್ದು, ಸದರಿ ಕಾರಣಗಳನ್ನು ಅಭಿಯೋಜನಾ ಪಕ್ಷವು ಖಡಾಖಂಡಿತವಾಗಿ ನಿರಾಕರಿಸುತ್ತದೆ. ಈ ಹಂತದಲ್ಲಿ ಅರ್ಜಿದಾರರು/2ನೇ ಆರೋಪಿತನು ನಿರೀಕ್ಷಣಾ ಜಾಮೀನು ಪಡೆಯಲು ಅರ್ಹನಿರುವುದಿಲ್ಲ. ಆದ್ದರಿಂದ ಜಾಮೀನು ಅರ್ಜಿಯನ್ನು ವಜಾ ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

**5. ಉಭಯೇತರ ವಾದಗಳನ್ನು ಆಲಿಸಲಾಯಿತು.**

**6. ಪ್ರಕರಣದ ತೀರ್ಮಾನಕ್ಕಾಗಿ ಈ ಕೆಳಕಂಡ ವಿಷಯಗಳನ್ನು ಗಣನೆಗೆ ತಗೆದುಕೊಳ್ಳಲಾಯಿತು.**

1. 2ನೇ ಆರೋಪಿತರು/ ಅರ್ಜಿದಾರರು ನಿರೀಕ್ಷಣಾ ಜಾಮೀನು ಪಡೆಯಲು ಅರ್ಹರು ಎಂಬುದನ್ನು ಸಕಾರಣಗಳ ಮೂಲಕ ಸಾಭೀತುಪಡಿಸುವರೇ ?

2, ಏನು ಆದೇಶ ?

**7. ಮೇಲ್ಕಂಡ ಪ್ರಶ್ನೆಗಳಿಗೆ ಈ ಕೆಳಂಡಂತೆ ಉತ್ತರಃ**

ಅಂಶ ಸಂಖ್ಯೆ 1: ಸಕಾರಾತ್ಮಕವಾಗಿ

ಅಂಶ ಸಂಖ್ಯೆ 2: ಈ ಕೆಳಕಂಡ ಅಂತಿಮ ಆದೇಶದಂತೆಃ

## ಕಾರಣಗಳು

**8. ಅಂಶ ಸಂಖ್ಯೆ 1: ಕ್ಕೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯಃ**

ಅರ್ಜಿದಾರ/2ನೇ ಆರೋಪಿತರ ವಿರುದ್ಧ ಎದುರುದಾರರು ಎನ್.ಡಿ.ಪಿ.ಎಸ್ ಕಾಯ್ದೆ ಕಲಂ 20(**b**)(**ii**)(**B**) ರಅಡಿಯಲ್ಲಿ ಗುನ್ನಾ ಸಂಖ್ಯೆ 120/2025 (**Spl**. **Case No**. 230/2025) ರಂತೆ ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

9. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಆರೋಪಿಯು 1ನೇ ಆರೋಪಿಯ ಜೊತೆ ಸೇರಿಕೊಂಡು ಯಾವುದೇ ರಹದಾರಿ ಇಲ್ಲದೇ ಆಕ್ರಮವಾಗಿ ಒಣ ಗಾಂಜಾವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಲುವಾಗಿ ತಮ್ಮ ವಾಹನದಲ್ಲಿ ಸಾಗಾಣಿಕೆ ಮಾಡಲು ತೆಗೆದುಕೊಂಡು ಹೋಗುತ್ತಿದ್ದುದ್ದು ಹಾಗೂ ಸದರಿ ಆರೋಪಿತನು 1ನೇ ಆರೋಪಿಗೆ ಸಹಕಾರ ನೀಡಿ ಮೇಲ್ಕಂಡಂತೆ ಅಪರಾಧವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಸದರಿ ಆರೋಪಿಯು ಎಸಗಿರುವ ಅಪರಾಧವು ಜಾಮೀನು ರಹಿತವಾಗಿದ್ದು, 10 ವರ್ಷ ಕಠಿಣ ಸಜೆ ವಿಧಿಸತಕ್ಕಂತಹ ಅಪರಾಧವಾಗಿರುತ್ತದೆ ಮತ್ತು ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲ ವಿಚಾರಣೆ ಮಾಡತಕ್ಕಂತಹ ಪ್ರಕರಣವಾಗಿರುತ್ತದೆ.

ಸದರಿ ಈ ಮೇಲ್ಕಂಡ ಅರ್ಜಿದಾರರ ಪರ ವಕೀಲರು ಈ ಕೆಳಕಂಡ ಮಾನ್ಯ ಗೌರವಾನ್ವಿತ ಉಚ್ಚ ನ್ಯಾಯಾಲಯದ ಉಲ್ಲೇಖಗಳನ್ನು ನೀಡಿರುತ್ತಾರೆ.

1. **Mr**. **Shabrinath Patil V/s State of Karnataka in Criminal petition No**. 3118/2026 **dated** 13.03.2026.
2. **Shahrukh Ali V/s State of Haryana in CRM-M**-8778/2026 **dated** 24.03.2026.

ಸದರಿ ಆರೋಪಿತನ ಪರ ವಕೀಲರು ಉಲ್ಲೇಖಿಸಿರುವ ಮೇಲ್ಕಂಡ ಆದೇಶಗಳು ಈ ಪ್ರಕರಣದ ವಾಸ್ತಾವಂಶಗಳು ಹಾಗೂ ಕಾನೂನು ಪರಿಸ್ಥಿತಿಗಳಿಗೆ ಕೆಲವು ಸಂದರ್ಭಗಳಲ್ಲಿ ಹೊಂದಿಕೆಯಾಗಿರುತ್ತದೆ.

ಅರ್ಜಿದಾರರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಅರ್ಜಿದಾರರ ಮೇಲಿರುವ ಆರೋಪವು ಘನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡುವಂತಹ ಪ್ರಕರಣವಾಗಿದ್ದು, ಅಜೀವ ಕಾರಾವಾಸ ಅಥವಾ ಮರಣ ದಂಡನೆಯಿಂದ ದಂಡಿಸುವಂತಹ ಆಪಾದನೆಯಾಗಿರುವುದಿಲ್ಲ. ಅಲ್ಲದೇ ಈ ಪ್ರಕರಣದ 1ನೇ ಆರೋಪಿಯು ಮಾನ್ಯ ಗೌ. ಉಚ್ಚ ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ. ಅರ್ಜಿದಾರರು ಮೇಲ್ಕಂಡ ವಿಳಾಸದಲ್ಲಿ ಖಾಯಂ ವಾಸಿಯಾಗಿರುವುದರಿಂದ ವಿಚಾರಣೆಗೆ ಹಾಜರಾಗದಂತೆ ತಪ್ಪಿಸಿಕೊಳ್ಳುವ ಸಂಭವವಿರುವುದಿಲ್ಲ ಮತ್ತು ಅರ್ಜಿದಾರರಿಗೆ ಜಾಮೀನು ನೀಡಿದಲ್ಲಿ ಯಾವುದೇ ಸಾಕ್ಷಿ ಆಧಾರಗಳನ್ನು ನಾಶಪಡಿಸುವುದಿಲ್ಲ. ಒಂದು ವೇಳೆ ಅವಶ್ಯಕತೆ ಇದ್ದಲ್ಲಿ ತನಿಖೆಗೆ ಘನ ನ್ಯಾಯಾಲಯವು ಆದೇಶಿಸಿದ ರೀತಿಯಲ್ಲೇ ಸಹಕರಿಸಲು ಬದ್ಧರಾಗಿರುತ್ತಾರೆ. ಅರ್ಜಿದಾರರಿಗೆ ಜಾಮೀನು ನೀಡಿದಲ್ಲಿ ಘನ ನ್ಯಾಯಾಲಯವು ವಿಧಿಸುವ ಯಾವುದೇ ಷರತ್ತುಗಳನ್ನು ಪೂರೈಸಲು ಬದ್ಧರಾಗಿರುತ್ತಾರೆ ಮತ್ತು ಘನ ನ್ಯಾಯಾಲಯ ಆದೇಶಿಸುವಂತಹ ಜಾಮೀನುದಾರರನ್ನು ಒದಗಿಸಲು ಬದ್ಧರಾಗಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ. ಅದ್ದರಿಂದ ಸದರಿ ಅರ್ಜಿದಾರರ ಈ ಜಾಮೀನು ಅರ್ಜಿಯನ್ನು ಪುರಸ್ಕರಿಸಬಹುದಾಗಿರುತ್ತದೆ. ಆದ್ದರಿಂದ 1ನೇ ಅಂಶವನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದು ಇರುತ್ತದೆ.

**10. ಅಂಶ ಸಂಖ್ಯೆ 2ಕ್ಕೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯಃ**

ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಚರ್ಚಿಸಿದ ನಂತರ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

## ಆದೇಶ

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರಡಿಯಲ್ಲಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಿದೆ.

ಅರ್ಜಿದಾರ/ 2ನೇ ಆರೋಪಿತರನ್ನು ಒಂದು ವೇಳೆ ಎದುರುದಾರರು ಗುನ್ನಾ ಸಂಖ್ಯೆ 120/2025 (**Spl**. **Case No**. 230/2025) ರಡಿಯಲ್ಲಿ ದಸ್ತಗಿರಿ ಮಾಡಿದ್ದಲ್ಲಿ ಅವರಿಂದ ರೂ.1,00,000/-ಗಳ ವೈಯಕ್ತಿಕ ಬಾಂಡ್

ಹಾಗೂ ಅಷ್ಟೇ ಮೊತ್ತದ ಒಂದು ಜಾಮೀನುದಾರರನ್ನು ಪಡೆದುಕೊಂಡು ತಕ್ಷಣ ಜಾಮೀನಿನ ಮೇಲೆ ಬಿಡುಗಡೆಗೊಳಿಸತಕ್ಕದ್ದು. ಅರ್ಜಿದಾರ/ಆರೋಪಿತನು ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು.

1. ಅರ್ಜಿದಾರರು/ 2ನೇ ಆರೋಪಿತನು ಇಂದಿನಿಂದ 10 ದಿನಗಳ ಒಳಗಾಗಿ ಎದುರುದಾರ ಮುಂದೆ ಹಾಜರಾಗತಕ್ಕದ್ದು.

2. ಅರ್ಜಿದಾರರು/ 2ನೇ ಆರೋಪಿತನು ಯಾವುದೇ ಕಾರಣಕ್ಕೂ ಅಭಿಯೋಜನೆ ಸಾಕ್ಷಿಗಳನ್ನು ತಿರುಚತಕ್ಕದ್ದಲ್ಲ.

3. ಅರ್ಜಿದಾರರು/ 2ನೇ ಆರೋಪಿತನು ತನಿಖಾಧಿಕಾರಿಗೆ ಎಲ್ಲಾ ಸಹಕಾರಗಳನ್ನು ನೀಡತಕ್ಕದ್ದು.

4. ಅರ್ಜಿದಾರರು/ 2ನೇಆರೋಪಿತನು ನ್ಯಾಯಾಲಯದ ವಿಚಾರಣೆಗೆ ಎಲ್ಲಾ ಸಹಕಾರಗಳನ್ನು ನೀಡತಕ್ಕದ್ದು.

5. ಅರ್ಜಿದಾರರು/ 2ನೇ ಆರೋಪಿತನು ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಸದರಿ ಜಾಮೀನು ಆದೇಶ ತಕ್ಷಣದಲ್ಲಿ ರದ್ದುಗೊಳ್ಳುತ್ತದೆ.

( ಶೀಘ್ರಲಿಗಾರರಿಗೆ ಕಂಪ್ಯೂಟರ್ ಮೂಲಕ ಉಕ್ತಲೇಖನ ನೀಡಿದ್ದು, ಬೆರಳಚ್ಚು ಮಾಡಿದ್ದು, ತಿದ್ದುಪಡಿ ಮಾಡಿ ಪುನಃ ತೆರೆದ ನ್ಯಾಯಾಲಯದಲ್ಲಿ ಘೋಷಣೆಯನ್ನು ದಿನಾಂಕ 05.06.2026 ರಂದು ಮಾಡಿರುತ್ತೇನೆ)

(ಶ್ರೀಮತಿ ಪ್ರಭಾವತಿ .ಜಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ.